ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ.ಎಫ್.ಸಿ
ನ್ಯಾಯಾಲಯ ಬೀದರ್
ಸಿ.ಸಿ.ನಂ. **2272–2022**

ಪ್ರಾಸಾ–4
ಚಾಸಾ–10
ದಿಃ 08–11–2023

ಹೆಸರು : ಕಪೀಲ್ ದೇವ್
ತಂದೆ ಹೆಸರು : ಅಂಬರಾವ್
ವಯಸು : 43
ಉದ್ಯೋಗ : ಪಿ ಐ ಎನ್ ಟಿ ಪಿ ಎಸ್ ಬೀದರ್.
ವಾಸ ಸ್ಥಳ : ಬೀದರ್.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತ್ತು
ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರವರಿಂದಃ

2021 ರಿಂದ 2022 ರವರೆಗೆ ಎನ್ ಟಿ ಪಿ ಎಸ್ ಠಾಣೆಯಲ್ಲಿ ಪಿ ಐ ಅಂತ ಸೇವೆ ಸಲ್ಲಿಸಿರುತ್ತೇನೆ.

ದಿ. 18–02–2022 ರಂದು ರಾತ್ರಿ. 7.30 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ಇಬ್ಬರು ಆರೋಪಿತರನ್ನು ಹಾಗೂ ಜಪ್ತಿ ಪಂಚನಾಮೆ ಹಾಗೂ ಒಂದು ಜ್ಞಾಪನ ಪತ್ರ ಮತ್ತು ಮುದ್ದೆ ಮಾಲನ್ನು ಕೊಟ್ಟಿದ್ದನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ಠಾಣಾ ಗುನ್ನೆ ನಂ. 24/2022 ರಲ್ಲಿ ಪ್ರಕರಣ ದಾಖಲಸಿ ನ್ಯಾಯಾಲಯಕ್ಕೆ ಪ್ರ.ವ.ವ. ಸಲ್ಲಿಸಿರುತ್ತೇನೆ.

ಅದೇ ದಿನ ಚಾಸಾ 4 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಚಾಸಾ 5 ರಿಂದ 9 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ನೊಂದ ಮಹಿಳೆಯ ಚಾಸಾ 4 ರವರ ಆಧಾರ್ ಕಾರ್ಡ್ ಪಡೆದಿರುತ್ತೇನೆ.

ಅದೇ ದಿನ ಮು.ಮಾಲನ್ನು ನ್ಯಾಯಾಲಯಕ್ಕೆ ಜಮಾ ಮಾಡಿರುತ್ತೇನೆ.

ಆರೋಪಿ ನಂ. 1 ಮತ್ತು 3 ರವರಿಗೆ ನೋಟಿಸ್ ಕೊಟ್ಟು ವಿಚಾರಣೆ ಮಾಡಿರುತ್ತೇನೆ.

ದಿ. 19–02–2022 ರಂದು 4 ನೇ ಆರೋಪಿಗೆ ನೋಟಿಸ್ ಕೊಟ್ಟು ವಿಚಾರಣೆ ಮಾಡಿರುತ್ತೇನೆ.

ದಿ. 12–02–2022 ರಂದು 2 ನೇ ಆರೋಪಿಗೆ ನೋಟಿಸ್ ಕೊಟ್ಟು ವಿಚಾರಣೆ ಮಾಡಿರುತ್ತೇನೆ.

ದಿ. 03–08–2022 ರಂದು ಸಾಯಿ ಪ್ಯಾಲೇಸ್‌ನ ಕಾಗದ ಪತ್ರಗಳನ್ನು ಪಡೆದಿರುತ್ತೇನೆ.

ದಿ. 02–07–2022 ರಂದು ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ಆರೋಪ ಸಾಭಿತಾಗಿದ್ದರಿಂದ ದೋ. ಪತ್ರವನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ ಆರೋಪಿತರನ್ನು ಮತ್ತು ಮು.ಮಾಲನ್ನು ನೋಡಿ ಗುರುತಿಸಿರುತ್ತಾರೆ.

ಪ್ರ.ವ.ವ. ನಿಪಿ 3 ಎಂದು , ಸಾಕ್ಷಿಯ ಸಹಿಯನ್ನು ನಿಪಿ 3 (ಎ) ಎಂದು , ನಿಪಿ 2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2 (ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು: 3, 4 ನೇ ಆರೋಪಿ ಪರ ಶ್ರೀ ಜೆ. ಜೆ. ವಕೀಲರಿಂದ :

ಸಂಪೂರ್ಣ ತನಿಖೆ ಸೃಷ್ಟಿ ಮಾಡಿದ್ದು ಇರುತ್ತದೆ ಅಂದರೆ ಸರಿಯಲ್ಲ. ಎಲ್ಲಾ ಹೇಳಿಕೆಗಳನ್ನು ಸೃಷ್ಟಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸುಳ್ಳು ದೋ. ಪತ್ರ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಹಾಗೂ ಚಾಸಾ 4 ಒಬ್ಬರಿಗೊಬ್ಬರು ಜೊತೆಯಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. 3 ಮತ್ತು 4 ನೇ ಆರೋಪಿತರು ಈ ಪ್ರಕರಣದಲ್ಲಿ ಭಾಗಿಯಾಗಿಲ್ಲ ಅಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಜಪ್ತಿ ಮಾಡಿಕೊಂಡತಹ ಕಾಂಡೊಮ್ ಬಳಸಲಾಗಿದೆ ಅಂತ ತಜ್ಞರ ವರದಿ ಇರುವುದಿಲ್ಲ ಅಂದರೆ ಸರಿಯಲ್ಲ. ಯಾರು ರೂಮನ್ನು ಬುಕ್ ಮಾಡಿರುತ್ತಾರೆ ಅಂತ ಸಾಕ್ಷಿ ಇರುವುದಿಲ್ಲ ಅಂದರೆ ಸರಿಯಲ್ಲ. ಈ ಬಗ್ಗೆ ಯಾವುದೇ ದಾಖಲೆಗಳನ್ನು ಜಪ್ತಿ ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಲಾಡ್ಜ್‌ನ ಲೇಡ್ಜರ್ ನ್ನು ಜಪ್ತಿ ಪಡಿಸಿಕೊಂಡಿಲ್ಲ ಅಂದರೆ ನಿಜ. ರೂಮ್ ನಂ. 306 ಸದರಿ ಉದ್ದೇಶಕ್ಕೊಸ್ಕರ ಕೊಡಲಾಗಿದೆ ಅಂತ ರೂಮ್‌ನ ಅಕ್ಕಪಕ್ಕದವರನ್ನು ಹಾಗೂ ರೂಮ್ ಬಾಯ್ ನ್ನು ವಿಚಾರಣೆ ಮಾಡಿಲ್ಲ ಅಂದರೆ ಸರಿಯಲ್ಲ. ಆ ಸಮಯದಲ್ಲಿ 3 ನೇ ಆರೋಪಿ ಲಾಡ್ಜ್‌ನ ಮ್ಯಾನೇಜರ್ ಇದ್ದಿರಲಿಲ್ಲ ಅಂದರೆ ಸರಿಯಲ್ಲ. 4 ನೇ ಆರೋಪಿ ಲಾಡ್ಜ್‌ನ ಮಾಲೀಕ ಇದ್ದ ಅಂತ ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಅಂದರೆ ಸರಿಯಲ್ಲ. ಆ ರೂಮ್‌ನಲ್ಲಿ ಅನೈತಿಕ ವೇಶ್ಯವಾಟಿಕೆ ನಡೆದಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಮತ್ತು ನಮ್ಮ ಹಿರಿಯ ಅಧಿಕಾರಿಗಳು ಸೇರಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದೋ. ಪತ್ರದಲ್ಲಿ ಲಗತ್ತಿಸಿದಂತಹ ದಾಖಲೆ ಲಾಡ್ಜ್‌ನ ಲೈಸೆನ್ಸ್ ಇರುತ್ತದೆ ವಿನಹ ಮಾಲಿಕತ್ವದ ದಾಖಲೆ ಇರುವುದಿಲ್ಲ ಅಂದರೆ ಸರಿಯಲ್ಲ ಮತ್ತು ಸಾಯಿ ಪ್ಯಾಲೇಸ್ ಅಂತ ಯಾವುದೇ ದಾಖಲೆ ಇರುವುದಿಲ್ಲ ಅಂದರೆ ಸರಿಯಲ್ಲ.

ಲಾಡ್ಜ್‌ನಲ್ಲಿ ಸಿಸಿಟಿವಿ ಫೂಟೇಜ್‌ನ್ನು ಜಪ್ತಿ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಚಾಸಾ 1 ರವರೊಂದಿಗೆ ಸ್ವೀಕರಿಸಿದಂತಹ ಜ್ಞಾಪನ ಪತ್ರ ಸ್ಪೆಷಲ್ ಡೈರಿಯಲ್ಲಿ ವಿಶೇಷ ಬಾತ್ಮಿ ಬಂದಿರುತ್ತದೆ ಅಂತ ನಮೂದು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಮು.ಮಾಲನ್ನು ಸೀಲು ಮಾಡಿದಂತಹ ಸ್ಥಿತಿಯಲ್ಲಿ ಪಡೆದಿಲ್ಲ ಅಂದರೆ ಸರಿಯಲ್ಲ.

1 ಮತ್ತು 2 ನೇ ಆರೋಪಿ ಪರವಾಗಿ ಶ್ರೀ. ಪಿ ಕೆ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದರಿಂದ ಅಳವಡಿಸಿಕೊಳ್ಳಲಾಯಿತು .
ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಬೆರಳಚ್ಚು ಮಾಡಲಾಗಿದೆ.)
ಓ.ಹೆ.ಕೆ.ಸರಿ.ಇದೆ,

ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ ಮತ್ತು
ಜೆ.ಎಮ.ಎಫ.ಸಿ ಬೀದರ .